## ಇಲ್ಲಿಯವರೆಗೆ



ಬಂಗಾಳದ ಯಾವುದೋ ಊರಿನ ಕಾಯಕನಾಥ ತಾನು ಪ್ರೇಮಿಸಿದ ಹುಡುಗಿ ಮಿನಾಲಿಯೊಂದಿಗೆ ಬದುಕು ಕಟ್ಟಿಕೊಂಡಿದ್ದು ಕರ್ನಾಟಕದಲ್ಲಿ. ಪತ್ನಿ ಹಾಗೂ ಮಗ ಸಾರಂಗನೊಂದಿಗೆ ಬದುಕು ಬಂಗಾರವಾಯಿತು ಎನ್ನುವಷ್ಟರಲ್ಲಿ ಮಿನಾಲಿಗೆ ಅನಾರೋಗ್ಯ. ಊರಿಗೆ ಹೋದರೆ ಎಲ್ಲವೂ ಸರಿಹೋದೀತು ಎನ್ನುವ ನಿರೀಕ್ಷೆಯಲ್ಲಿ ತವರಿಗೆ ಬಂದ ಕಾಯಕನಾಥನಿಗೆ ಎದುರಾದುದು ದುರಂತಗಳ ಸರಮಾಲೆ. ಪತ್ನಿ ಅನಾರೋಗ್ಯದಿಂದ ಚೇತರಿಸಿಕೊಳ್ಳದೆ ಸಾವನ್ನಪ್ಪಿದರೆ, ಮಗ ಹಾವಿನ ಕಡಿತಕ್ಕೆ ಬಲಿಯಾದ. ತನ್ನ ಸರ್ವಸ್ವವನ್ನೂ ಕಳೆದುಕೊಂಡ ಕಾಯಕನಾಥ ಒಬ್ಬಂಟಿಯಾಗಿ ಮತ್ತೆ ಕರ್ಮಭೂಮಿಯತ್ತ ಮುಖಮಾಡಿದ. ಆದರೆ, ಈ ಬಾರಿಯ ದಾರಿ ಅವನನ್ನು ಕರೆದುಕೊಂಡು ಹೋದುದು ಊರಿಗಲ್ಲ...

ಬದುಕಲೆಂದು ಬಂದವನಲ್ಲ... ಆದರೂ ಸಾವನ್ನು ಅಷ್ಟು ಸುಲಭವಾಗಿ ಸ್ವೀಕರಿಸಲೂ ಮನಸ್ಸು ಬರುತ್ತಿಲ್ಲ... ಇದ್ದಷ್ಟು ದಿನ ಇಲ್ಲೇ ಹೀಗೇ ದಿನಕಳೆದು ಕೊನೆಗೊಂದು ದಿನ ಈ ಪ್ರಕೃತಿಯಲ್ಲೇ ಮಣ್ಣಾಗಬೇಕು..!

ಹೊಳೆಯಲ್ಲಿ ಮುಳುಗೇಳಿದ. ಈಜಿದ. ಹಸಿವಾದಾಗ ಹಣ್ಣು ತಿಂದ. ನೀರು ಕುಡಿದ. ಹೊಳೆಯ ಹಾದಿಯಲ್ಲಿ ಅಡ್ಡಾಡಿದ. ಮನೋರಂಜನೆಗೆ, ಏಕಾಂತಕ್ಕೆ ತಿಳಿದ ಹಿಂದಿ ಹಾಡುಗಳನ್ನು ಬಾಯಿಗೆ ಬಂದಂತೆ ಹಾಡಿದ. ಹೊಸ ಹಾಡುಗಳನ್ನು ಕಟ್ಟಿದ.. ಒಂದಷ್ಟು ಪ್ರಾಣಿಗಳು ಕಣ್ಣಿಗೆ ಬಿದ್ದವು ಹಾವು, ಇಲಿ, ಮೊಲಗಳು ಎಲ್ಲೆಂದರಲ್ಲಿ ನಿರ್ಭಯವಾಗಿ ಅಲೆಯುತ್ತಿದ್ದವು. ಅವುಗಳಿಗೆ ನಿರ್ಬಂಧವಿರಲಿಲ್ಲ. ಮನುಷ್ಯರಂತೆ ಸೀಮಾರೇಖೆ ಇರಲಿಲ್ಲ. ಇದು ನನ್ನ ಜಾಗ, ಇದು ನನ್ನ ಮನೆ, ಈ ನಾಲ್ಕು ಗೋಡೆಗಳ ನಡುವೆ ನಾನಿರುವೆ ಇದು ನನ್ನದು ಇದು ನಿನ್ನದು ಎಂಬ ಧೋರಣೆ ಇರಲಿಲ್ಲ. ಅತಿಕ್ರಮಣ ಇರಲಿಲ್ಲ. ಪ್ರಾಣಿ ಪಕ್ಷಿಗಳು ಕಾಡಿನಲ್ಲಿ ಹಾಯಾಗಿ ಬದುಕಿಕೊಂಡಿರುವುದು ನೋಡಿದಾಗ ಮನುಷ್ಯನೇ ಸ್ವಾರ್ಥಿ ಎನಿಸಿತ್ತು.. ಹೀಗೆ ಎರಡು ಮೂರು ದಿನಗಳು ಅಲ್ಲಿಲ್ಲಿ ಅಡ್ಡಾಡಿ ಕಾಯಕನಾಥನಿಗೆ ಆ ಕಾಡು, ಹೊಳೆ ಪರಿಚಿತವೆನಿಸಿತು. ಪ್ರಕೃತಿಯೊಂದಿಗಿನ ಈ ಅನುಸಂಧಾನ ಅವನಿಗೆ ಹಿತವೆನಿಸಿತು. ಒಂಟಿತನ ಆಪ್ಯಾಯಮಾನವೆನಿಸಿತ್ತು. ಅಲ್ಲಿನ ದಿನಚರಿಗೆ ನಿಧಾನವಾಗಿ ಹೊಂದಿಕೊಳ್ಳತೊಡಗಿದ. ಪಕ್ಷಿಗಳ ಕಲರವ, ಕ್ರಿಮಿಕೀಟಗಳ ಸದ್ದನ್ನು ಕಿವಿ ನಿಮಿರಿಸಿ ಕೇಳುತ್ತಿದ್ದ. ಬಣ್ಣ ಬಣ್ಣದ ವಿವಿಧ ಪಕ್ಷಿಗಳನ್ನು ಆಸಕ್ತಿಯಿಂದ ನೋಡುತ್ತ, ಅವುಗಳನ್ನು ಪರೀಕ್ಷಾತ್ಮಕವಾಗಿ ಗಮನಿಸತೊಡಗಿದ ಬಳಿಕ ಅವುಗಳ ಜೀವನಶೈಲಿ ಅವನಿಗೆ ಅರ್ಥವಾಗತೊಡಗಿತ್ತು.

ಪ್ರಾಣಿ ಪಕ್ಷಿಗಳು ತಮ್ಮ ಉದರ ತುಂಬಿದ ಬಳಿಕ ಬೇರೆ ಗೊಡವೆಗೆ ಹೋಗದೇ ತಮ್ಮ ಪಾಡಿಗೆ ತಾವು ಇರುತ್ತವೆ ಎಂದು ಅವನು ಅರ್ಥ ಮಾಡಿಕೊಂಡಿದ್ದ. ಆದರೆ ಮನುಷ್ಯ ಎಂಬ ಪ್ರಾಣಿ ಎಷ್ಟೊಂದು ಸ್ವಾರ್ಥಿ! ಆತನಿಗೆ ಉದರ ತುಂಬಿದ ಬಳಿಕವೂ ಇನ್ನಷ್ಟು ಗಳಿಸಬೇಕು, ಕೂಡಿಡಬೇಕು ಮುಂದಿನ ಪೀಳಿಗೆಗಾಗುವಷ್ಟು ಒಟ್ಟು ಮಾಡಿಡಬೇಕು.. ಆಸ್ತಿ, ಹಣದ ಗಳಿಕೆಯ ಹಿಂದೆ ಬಿದ್ದು ಆತ ಜೀವನದ ನಿಜವಾದ ಸೌಂದರ್ಯವನ್ನು ಅನುಭವಿಸುವುದನ್ನು ಬಿಟ್ಟು, ಸಂವೇದನರಹಿತನಾದ ಒಂದು ಯಂತ್ರದಂತಾಗುತ್ತಾನೆ.

ನಿಜವಾದ ಜೀವನ ಅದನ್ನು ಆನಂದಿಸುವುದರಲ್ಲಿದೆ! ಸುತ್ತಲಿನ ಸೊಬಗಿನಲ್ಲಿ ಹುದುಗಿಕೊಂಡಂತೆ ಕಾಯಕನಾಥ ತನ್ಮಯನಾಗಿದ್ದ. ಯಾವುದೇ ಬೇಕುಗಳಿಲ್ಲದ ಆ ದಿನಚರಿ ಅವನಿಗೆ ಹಿತವಾಗಿತ್ತು. ಮನುಷ್ಯ ಜೀವನವನ್ನು ನೆಮ್ಮದಿಯಾಗಿಸಿಕೊಳ್ಳುವುದು ಅವನ ಕೈಯಲ್ಲೇ ಇರುತ್ತದೆ. ತನ್ನ ಅನಿವಾರ್ಯತೆಗಿಂತಲೂ ಹೆಚ್ಚು ಬೇಕೆಂಬ ಆಸೆಗೆ ಹೋಗಿ ಆ ಮಿತಿ ದಾಟಿದಾಗಲೇ ಆ ಹದ ಕಳೆದುಕೊಳ್ಳುತ್ತಾನೆ. ಅಲ್ಲಿ ಮಂಗಳೂರಿನ ಕಾಂಕ್ರೀಟಿನ ಕಾಡಿನೊಳಗೆ, ಯಾಂತ್ರಿಕವಾಗಿ ಕಾಲಿಗೆ ಚಕ್ರ ಕಟ್ಟಿಕೊಂಡಂತೆ, ಮಿನಾಲಿ ಮತ್ತು ಸಾರಂಗನೊಡನೆ ಕಳೆದ ಜೀವನ ಅದರ ಬಗ್ಗೆ ಹೆಚ್ಚು ಪ್ರೀತಿ ಹುಟ್ಟಿಸಿತ್ತು. ಅವರಿಲ್ಲದ ಈ ಬದುಕು, ಆ ಪರಿಸರದಿಂದ ಇಷ್ಟು ದೂರ ಬಂದಾಗ ಅದಾವುದೋ ದಿವ್ಯ ಜ್ಞಾನ ಹೊಳೆದಂತೆ ಬದುಕಿನ ಬಗ್ಗೆ ದೃಷ್ಟಿಕೋನವೇ ಬದಲಿಸಿದಂತೆ ಭಾಸವಾಗುತ್ತದೆ. ಹಾಗಾದರೆ ನಿಜವಾಗಲೂ ಬದುಕುವುದೆಂದರೆ, ಎಲ್ಲವೂ ನಮ್ಮ ಮನಸ್ಥಿತಿಗೆ ಅನುಗುಣವಾಗಿ ನಡೆದುಕೊಳ್ಳುವುದಷ್ಟೇ ನಿನ್ನೆಯ ನೆನಪುಗಳಲ್ಲಿ ಬದುಕುವುದು ನಾಳೆಯ ಕಲ್ಪನೆಗಳಲ್ಲಿ ಭರವಸೆಗಳಲ್ಲಿ ಕನಸು ಕಾಣುವುದು!

ಕಾಯಕನಾಥನಿಗೆ ಬೇಸರ ಕಾಡಿ ಸ್ವಲ್ಪ ಹೊತ್ತು ಅಡ್ಡಾಡಲೆಂದು ಎದ್ದು ನಡೆದ. ನದಿಯ ಜಾಗದಿಂದ ಹೊರಟವ, ಅಲ್ಲಿಗೇ ತಿರುಗಿ ಬರಲು ಈಗ ಬಂದ ಹಾದಿಯನ್ನು ಸರಿಯಾಗಿ ಗುರುತು ಹಿಡಿಯಲು ಒಂದು ಚೂಪಾದ ಮರದ ಗೆಲ್ಲಿನಿಂದ ಗುರುತು ಮಾಡುತ್ತ ನಡೆದ.

ಹಾಗೇ ನಿಧಾನಕ್ಕೆ ಕಾಲೆಳೆದುಕೊಂಡು ನಡೆಯುತ್ತಾ ಬಂದವನಿಗೆ, ಎದುರಿಗೆ ಯಾರೋ ಬಂದಂತಾಗಿ ಥಟ್ಟನೇ ನಿಂತ.

'ಯಾರೋ ನೀನು..? ಇಲ್ಲೇನು ಮಾಡ್ತಿದ್ಯಾ..?' ಕಂದು ಸಮವಸ್ತ್ರ ಧರಿಸಿದ ದಪ್ಪ ಮೀಸೆಯವನ ನಿಲುವಿನಷ್ಟೇ ಅವನ ಧ್ವನಿಯಲ್ಲೂ ಠೀವಿ ಇತ್ತು. ಆತ ಅರಣ್ಯಾಧಿಕಾರಿ ಎಂದು ಅರಿವಾಗಲು ಕಾಯಕನಾಥನಿಗೆ ತಡವಾಗಲಿಲ್ಲ.

'ಏನಿಲ್ಲ ಹೀಗೇ ಅಡ್ಡಾಡುತ್ತಿದ್ದೇನೆ...' ಕಾಯಕನಾಥ ಕಕ್ಕಾಬಿಕ್ಕಿಯಾದರೂ ಸಾವರಿಸಿ ನುಡಿದ.

'ಅಡ್ಡಾಡಲು ಇದೇನು ಉದ್ಯಾನವೇ? ಇದು ಕಾಡು ನಿಜಾ ಹೇಳು ಇಲ್ಲೇನು ಮಾಡಲು ಬಂದಿರುವೆ... ಎಷ್ಟು ಜನ ಇದ್ದೀರಿ ನೀವು?' ಆ ಅಧಿಕಾರಿ ಕಾಯಕನಾಥನನ್ನು ಸಮೀಪಿಸಿದವನು ಅವನ ಅಂಗಿಯ ಕಾಲರಿಗೇ ನೇರವಾಗಿ ಕೈಹಾಕಿ ಗದರಿದ. ಮಾನಸಿಕವಾಗಿ ದುರ್ಬಲನಾಗಿದ್ದ ಕಾಯಕನಾಥನಿಗೆ ಅಳುವೇ ಬಂದು ಬಿಟ್ಟಿತು.

'ಸರ್... ನಾನೊಬ್ಬನೇ ಇದ್ದೀನಿ. ಬದುಕು ಬೇಡ ಅನಿಸಿತು... ಕಾಡಿಗೆ ಬಂದುಬಿಟ್ಟೆ ಸರ್' ಅವನ ಉತ್ತರ ಆ ಅಧಿಕಾರಿಗೆ ಅಚ್ಚರಿ ತರಿಸಿರಬೇಕು.

'ಬದುಕಲು ಶಹರದಲ್ಲಿ ನೂರಾರು ದಾರಿ ಇರುವಾಗ ಕಾಡಿಗೆ ಬಂದಿರುವೆಯಾ? ಈ ಮಾತನ್ನು ನಾನು ನಂಬಬೇಕೇ?' ವ್ಯಂಗ್ಯದ ನಗೆ ನಕ್ಕ ಅ ಅಧಿಕಾರಿ.

ಕಾಯಕನಾಥ ಕೈ ಮುಗಿಯುತ್ತಾ, 'ಹೌದು ಸಾರ್... ನಿಜ ನಾನು ಪ್ರೀತಿಸುತ್ತಿದ್ದ ನನ್ನ ಸರ್ವಸ್ವವೂ ಆಗಿದ್ದ ನನ್ನ ಹೆಂಡತಿ, ಮಗು ಇಬ್ಬರನ್ನೂ ಕಳೆದುಕೊಂಡೆ ಬದುಕಲು ಏನೂ ಆಸಕ್ತಿ ಉಳಿದಿಲ್ಲ ಸರ್ ಬಂಗಾಲದಿಂದ ರೈಲು ಹತ್ತಿದ. ಟಿಕೇಟಿಗೆ ದುಡ್ಡಿರಲಿಲ್ಲ. ಇಲ್ಲಿ ಇಳಿಸಿದರು ಎದುರಿಗೆ ಕಾಣುತ್ತಿದ್ದ ಈ ಕಾಡು ಕೈಬೀಸಿ ಕರೆಯಿತು. ಬಂದು ಬಿಟ್ಟೆ. ಎರಡೇ ದಿನಕ್ಕೆ ಈ ಕಾಡಿನ ಮೇಲೆ ಪ್ರೀತಿ ಹುಟ್ಟಿದೆ ಹೋಗಬೇಕು ಅಂತ ಅನ್ನಿಸಲಿಲ್ಲ...'

'ಬಂಗಾಲದವನೇ? ಮತ್ತೆ ಕನ್ನಡ ಇಷ್ಟು ಅಚ್ಚುಕಟ್ಟಾಗಿ ಹೇಗೆ ಮಾತನಾಡುತ್ತೀಯಾ...?'

'ಮಂಗಳೂರಿನಲ್ಲಿ ಕಟ್ಟಡಗಳಲ್ಲಿ ಕೂಲಿ ಕೆಲಸ ಮಾಡ್ತಿದ್ದೆ ಅಲ್ಲಿ ಜನರ ಜೊತೆ ಬೆರೆತು ಕನ್ನಡ ಮಾತನಾಡಲು ಕಲಿತೆ. ಅಲ್ಲಿ ಮಕ್ಕಳು ಶಾಲೆಗೆ ಹೋಗ್ತಿದ್ರು. ಅವರ ಪುಸ್ತಕ ತಗೊಂಡು ಓದಲು ಬರೆಯಲು ಕಲಿತೆ. ಕಲೀಬೇಕು ಅನ್ನುವ ಹಟಕ್ಕೆ ಬಿದ್ದು ತುಂಬಾ ಓದತೊಡಗಿದೆ. ಒಂದು ಸಣ್ಣ ಹಾಳೆ ಬಿದ್ದರೂ ಎತ್ತಿಕೊಂಡು ಓದುತ್ತಿದ್ದೆ. ಹಾಗಾಗಿ ಅದೇ ನನ್ನ ಭಾಷೆಯಾಯಿತು ಸರ್...' ಕಾಯಕನಾಥನ ಮಾತಿನಲ್ಲಿ ಆ ಅಧಿಕಾರಿಗೆ ಪ್ರಾಮಾಣಿಕತೆ ಗೋಚರಿಸಿತು. ಅವರಿಗೂ ಕಾಡಿನಲ್ಲಿ ಅಪರೂಪಕ್ಕೆ ಸಿಕ್ಕ ಇಂಥ ವಿಲಕ್ಷಣ ಕಥೆಯ ಹುಡುಗನ ಬಗ್ಗೆ